


ಜೆಫ್ ಬೇಝೋಸ್ ನೇತೃತ್ವದಲ್ಲಿ ಅಂತರಿಕ್ಷ ಪ್ರವಾಸ ಕೈಗೊಂಡ ಸಾಹಸಿಗರು

‘ಸ್ಪೇಸ್ ಶಿಪ್ ಟೂ’ ಹಾಗೂ ಅದರ ವಾಹಕ ವಿಮಾನವಾದ ‘ವೈಟ್ ನೈಟ್ ಟೂ’ ವಿಮಾನಗಳ ನಿರ್ಮಾಣ ಹಾಗೂ ಪರೀಕ್ಷೆಯ ನಡುವೆ ಉಂಟಾದ ಅಪಘಾತಗಳು ಹಾಗೂ ಸಮಸ್ಯೆಗಳು ಅದನ್ನು ಮುಂದೆ ಹಾಕುತ್ತಾ ಬಂದವು. ಇದೀಗ ತಮ್ಮ ಕಾರ್ಯದಲ್ಲಿ ಬ್ರಾನ್ಸನ್ ಅವರು ಯಶಸ್ವಿಯಾಗಿರುವುದು ಸದ್ಯದ ಭವಿಷ್ಯದಲ್ಲಿ ಅಂತರಿಕ್ಷವು ಪ್ರವಾಸಿ ತಾಣವಾಗಿ ರೂಪುಗೊಳ್ಳುವ ಸಾಧ್ಯತೆಯನ್ನು ಹೆಚ್ಚುಮಾಡಿದೆ.

ಬ್ರಾನ್ಸನ್ ಅವರ ಯಶಸ್ಸು ಅಂತರಿಕ್ಷ ಪ್ರವಾಸವನ್ನು ಸಾಧ್ಯಮಾಡುವಲ್ಲಿ ಒಂದು ಮೈಲಿಗಲ್ಲಾಗಿರುವಂತೆಯೇ, ಪ್ರಸ್ತುತ ವ್ಯಾಪಾರ ವ್ಯವಹಾರದಲ್ಲಿ ಅವರ ಪ್ರತಿಸ್ಪರ್ಧಿ ಆಗಿರುವವರ ವಿರುದ್ಧ, ಅದರಲ್ಲೂ ‘ಅಮೆಜಾನ್’ ಖ್ಯಾತಿಯ ಜೆಫ್ ಬೇಝೋಸ್ ವಿರುದ್ಧ ಸಾಧಿಸಿರುವ ಪ್ರಮುಖ ವಿಜಯವೂ ಆಗಿದೆ.

ಬೇಝೋಸ್ ಅವರು ಬ್ರಾನ್ಸನ್ ಅವರಂತೆಯೇ ಅಂತರಿಕ್ಷ ಪ್ರವಾಸ ಸೇವೆಯನ್ನು ವಾಣಿಜ್ಯಾತ್ಮಕವಾಗಿ ಒದಗಿಸುವಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ. ಅಂತರಿಕ್ಷ ಪ್ರವಾಸದ ಸಂಬಂಧದಲ್ಲಿ ಅವರು ಸ್ಥಾಪಿಸಿರುವ ‘ಬ್ಲೂ ಆರಿಜಿನ್’ ಸಂಸ್ಥೆ ಸಿದ್ಧಗೊಳಿಸಿರುವ ‘ನ್ಯೂ ಷಪರ್ಡ್’ ರಾಕೆಟ್ ವಾಹನ ಜುಲೈ 20ರಂದು ನಡೆಸಿದ ಮೊದಲ ‘ಪ್ರಯಾಣಿಕರ ಯಾನ’ದಲ್ಲಿ ಸ್ವತಃ ಬೇಝೋಸ್ ಅವರೇ ತಮ್ಮ ಸೋದರನೊಂದಿಗೆ ಭಾಗಿಯಾಗಿದ್ದಾರೆ. ಅವರಿಬ್ಬರ ಜೊತೆಗೇ ಸುಮಾರು ಅರವತ್ತು ವರ್ಷಗಳ ಹಿಂದೆಯೇ ಅಮೆರಿಕದ ಮಹಿಳಾ ಗಗನಯಾತ್ರಿಯಾಗುವುದಕ್ಕೆ ಅಗತ್ಯವಾದ ತರಬೇತಿ ಪಡೆದರೂ ಅಂತರಿಕ್ಷಯಾನವನ್ನು ಕೈಗೊಳ್ಳಲಾಗದ ವಾಲಿ ಫಂಕ್ ಈಗ ತಮ್ಮ 82ನೇ ವಯಸ್ಸಿನಲ್ಲಿ ಅಂತರಿಕ್ಷಕ್ಕೆ ತೆರಳಿದ್ದಾರೆ.

ಹರಾಜಿನಲ್ಲಿ 28 ದಶಲಕ್ಷ ಡಾಲರ್ (ಸುಮಾರು 210 ಕೋಟಿ ರೂಪಾಯಿ) ತೆತ್ತು ಬೇಝೋಸ್‌ರ ಜೊತೆಗೆ ‘ನ್ಯೂ ಷಪರ್ಡ್’ನ ಮೊದಲ ಪ್ರಯಾಣಿಕ ಯಾನದಲ್ಲಿ ಭಾಗವಹಿಸುವ ಅವಕಾಶವನ್ನು ಪಡೆದುಕೊಂಡ ಅಮೆರಿಕದ ಸಿರಿವಂತರೊಬ್ಬರು ಕೂಡ ಅಂತರಿಕ್ಷಯಾನ ನಡೆಸಿದ್ದಾರೆ.

ಹಾಗೆ ನೋಡಿದರೆ ಬ್ರಾನ್ಸನ್ ಅವರು ತಮ್ಮ ಅಂತರಿಕ್ಷಯಾನವನ್ನು ಇನ್ನೂ ಸ್ವಲ್ಪ ತಡವಾಗಿ ಕೈಗೊಳ್ಳಬೇಕಿತ್ತು. ಆದರೆ ಯಾವಾಗ ಬೇಝೋಸ್ 2021ರ ಜುಲೈ 20ರಂದು ನ್ಯೂ ಷಪರ್ಡ್‌ನಲ್ಲಿ ಅಂತರಿಕ್ಷಯಾನವನ್ನು ಕೈಗೊಳ್ಳುತ್ತೇನೆಂದು ಘೋಷಿಸಿದರೋ ಆಗ ಬ್ರಾನ್ಸನ್ ಅದಕ್ಕಿಂತ ಮೊದಲು ತಮ್ಮ ಅಂತರಿಕ್ಷ ಪ್ರವಾಸವನ್ನು ಆತುರದಿಂದ ಕೈಗೊಂಡರು. ಆ ಪ್ರಯತ್ನದಲ್ಲಿ ಅವರಿಗೆ ವಿಜಯ ದೊರಕಿರುವುದು ಇತರ ಪ್ರತಿಸ್ಪರ್ಧಿಗಳ ವಿರುದ್ಧ ಅವರಿಗೆ ಉಂಟಾಗಿರುವ ಅನುಕೂಲವನ್ನು ಸೂಚಿಸುತ್ತದೆ. ಜೊತೆಗೇ ಈಗ ಬೃಹತ್ ವಾಣಿಜ್ಯೋದ್ಯಮಿಗಳ ನಡುವೆ ಒಂದು ಹೊಸ ‘ಅಂತರಿಕ್ಷ ಸ್ಪರ್ಧೆ’ಯ ಬಿಸಿ ದಿನಕಳೆದಂತೆ ಹೆಚ್ಚುತ್ತಿರುವುದನ್ನೂ ಇದು ತೋರಿಸುತ್ತದೆ.

ಜೆಫ್ ಬೇಝೋಸ್ ಅವರ ‘ಬ್ಲೂ ಆರಿಜಿನ್’



## ಅಂತರಿಕ್ಷ (ಸ್ಪೇಸ್) ಆರಂಭವಾಗುವುದು ಎಲ್ಲಿಂದ?

‘ಸ್ಪೇಸ್’ ಆರಂಭವಾಗುವುದು ಎಲ್ಲಿಂದ ಎನ್ನುವ ಬಗ್ಗೆ ಇಂದು ಒಮ್ಮತವಿಲ್ಲ. ನೆಲದಿಂದ ಮೇಲೇರಿದಂತೆ ಭೂಮಿಯ ವಾತಾವರಣ ವಿರಳವಾಗುತ್ತಾ ಹೋಗುತ್ತದೆ. ಕ್ರಮೇಣ ಅದು ಅಂತರಿಕ್ಷದ ಜೊತೆ ವಿಲೀನವಾಗುತ್ತದೆ. ವಿಮಾನಯಾನಕ್ಕೆ ಸಂಬಂಧಿಸಿದ ಒಂದು ಅಂತರರಾಷ್ಟ್ರೀಯ ಸಂಸ್ಥೆ 100 ಕಿಲೋಮೀಟರ್ ಎತ್ತರದಲ್ಲಿ ಅಂತರಿಕ್ಷ ಪ್ರಾರಂಭವಾಗುತ್ತದೆ ಎಂದು ಪರಿಗಣಿಸುತ್ತದೆ. ಆ ಎತ್ತರದಿಂದ ಮೇಲಕ್ಕೆ ಸಾಮಾನ್ಯ ವಿಮಾನವೊಂದರ ನಿಯಂತ್ರಣ ಹಾಗೂ ಹಾರಾಟ ಸಾಧ್ಯವಾಗುವುದಿಲ್ಲ.

ಈ ದೃಷ್ಟಿಯಿಂದ ಭೂವಾತಾವರಣ ಹಾಗೂ ಅಂತರಿಕ್ಷದ ನಡುವಿನ ಗಡಿ ಪ್ರದೇಶವನ್ನು ಖ್ಯಾತ ವಾಯುಯಾನ ತಜ್ಞ ಥಿಯೊಡೋರ್ ಫಾನ್ ಕಾರ್ಮಾನ್‌ನ ಗೌರವಾರ್ಥ ‘ಕಾರ್ಮನ್ ರೇಖೆ’ ಎಂದು ಕರೆಯಲಾಗುತ್ತದೆ. ಇದನ್ನೇ ಆಧಾರವಾಗಿಟ್ಟುಕೊಂಡು ಜೆಫ್ ಬೇಝೋಸ್ ಅವರು ತಮ್ಮ ಪ್ರತಿಸ್ಪರ್ಧಿ ಬ್ರಾನ್ಸನ್‌ರ ‘ಯೂನಿಟಿ’ ವಿಮಾನವನ್ನು ‘ಅಂತರಿಕ್ಷ ವಿಮಾನ’ವೆಂದು ಕರೆಯದೇ ‘ಅತಿ ಎತ್ತರದಲ್ಲಿ (ವಾತಾವರಣದೊಳಗೆ) ಹಾರುವ ವಿಮಾನ’ ಎಂದು ವ್ಯಂಗ್ಯವಾಡಿದ್ದಾರೆ.

ಆದರೆ ಅಮೆರಿಕಾದ ವಾಯುಪಡೆ 80 ಕಿ.ಮೀ.ಗಿಂತ ಮೇಲಿನ ಪ್ರದೇಶವನ್ನು ಅಂತರಿಕ್ಷ ಎಂದು ಪರಿಗಣಿಸುತ್ತದೆ. ಇದನ್ನು ಆಧರಿಸಿ ಬ್ರಾನ್ಸನ್ ಅವರು ‘ಯೂನಿಟಿ’ಯನ್ನು ಅಂತರಿಕ್ಷಯಾನವನ್ನು ಸಾಧ್ಯಮಾಡುವ ವಿಮಾನ ಎಂದು ಹೇಳಿಕೊಂಡಿದ್ದಾರೆ.